**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

**<u>ಸಿ.ಸಿ.ನಂ.2713/2021</u>**

**<u>ಪಿರ್ಯಾದಿ</u> ಃ ಟಿ.ಎಂ.ರುದ್ರೇಶ್ ಬಿನ್ ಲೇಟ್ ಟಿ.ಈ.ಮರುಳಪ್ಪ**

**-ವಿರುದ್ದ-**

**ಆರೋಪಿ/ತರುಃ ಶ್ರೀಮತಿ ಜಿ.ಟಿ.ಸುನಂದಮ್ಮ ಕೋಂ ಲೇಟ್ ಎನ್.ಕೆ.ನಾಗರಾಜು**

********

**<u>ಆ ರೋ ಪ ಣೆ</u>**

ದಿನಾಂಕ 17.09.2018 ರಂದು ಆರೋಪಿಯಾದ ನೀವು ನಿಮ್ಮ ಕೈಗಡ ಸಾಲ ತೀರುವಳಿ ಮತ್ತು ಅಡವಿಟ್ಟಿರುವ ಬಂಗಾರದ ಆಭರಣಗಳನ್ನು ಬಿಡಿಸಿಕೊಳ್ಳುವ ಸಲುವಾಗಿ ಪಿರ್ಯಾದುದಾರರಿಂದ ಸಾಲವಾಗಿ ರೂ.5,00,000/- ಗಳನ್ನು ಪಿರ್ಯಾದುದಾರರ ಖಾತೆ ಇರುವ ಸಿ.ಡಿ.ಸಿ.ಸಿ. ಬ್ಯಾಂಕ್ ಬೀರೂರು ಖಾತೆ ನಂ.120001608442 ರ ಚೆಕ್ ಸಂಖ್ಯೆ 429577 ರ ಅಕೌಂಟ್ ಪೇಯಿ ಚೆಕ್ ಮೂಲಕ ಆರೋಪಿಯಾದ ನಿಮ್ಮ ಖಾತೆಗೆ ಜಮಾ ಮಾಡಿಕೊಂಡಿದ್ದು, ಅದೇ ದಿವಸ ಆರೋಪಿಯಾದ ನೀವು ರೂ.500/- ಮುಖಬೆಲೆಯ ಇ-ಸ್ಟಾಂಪ್ ಪತ್ರದ ಮೇಲೆ ಪ್ರಾಮಿಸರಿ ಪತ್ರವನ್ನು ಪಿರ್ಯಾದುದಾರರ ಹೆಸರಿಗೆ ಬರೆದುಕೊಟ್ಟು, ಸದರಿ ಹಣಕ್ಕೆ ವಾರ್ಷಿಕ ಶೇಕಡ 12 ರಂತೆ ಕೊಡಲು ಒಪ್ಪಿದ್ದು, ನಂತರ ಪಿರ್ಯಾದುದಾರರು ಸದರಿ ಅಸಲು ಹಣ ಮತ್ತು ಬಡ್ಡಿಯನ್ನು ನೀಡುವಂತೆ ಕೇಳಿದಾಗ, ಆರೋಪಿಯಾದ ನೀವು ದಿನಾಂಕ 18.05.2021 ರಂದು ಸದರಿ ಅಸಲು ಹಣ ಮತ್ತು ಬಡ್ಡಿ ಬಾಬ್ತು ರೂ.6,75,000/- ಗಳನ್ನು ಮೂರು ತಿಂಗಳ ಒಳಗೆ ಕೊಡುವುದಾಗಿ ತಿಳಿಸಿ ನಿಮ್ಮ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ತರೀಕೆರೆ ಶಾಖೆಯ ಚೆಕ್ ಸಂಖ್ಯೆ 828720 ನ್ನು ರೂ.6,75,000/- ಗಳಿಗೆ ಮುಂದಿನ ದಿನಾಂಕ 18.08.2021 ನ್ನು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದಿಯು ದಿನಾಂಕ 18.08.2021 ರಂದು ತನ್ನ ಖಾತೆ ಇರುವ ಕೆನರಾ ಬ್ಯಾಂಕ್, ತರೀಕೆರೆ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ಚೆಕ್ ಮತ್ತು ಹಿಂಬರಹವನ್ನು ದಿನಾಂಕ

18.08.2021 ರಂದು ನೀಡಿರುತ್ತಾರೆ, ಅನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ ದಿನಾಂಕ 21.08.2021 ರಂದು ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸು ಆರೋಪಿಯಾದ ನಿಮಗೆ ಜಾರಿಯಾಗದೆ ನಾಟ್ ಕ್ಲೈಮಡ್ ಎಂದು ದಿನಾಂಕ 07.09.2021 ರಂದು ವಾಪಸ್ಸು ಬಂದಿದ್ದು, ಆದರೂ ಸಹ ಆರೋಪಿಯಾದ ನೀವು ಯಾವುದೇ ಹಣ ಹಿಂದಿರುಗಿಸಿರುವುದಿಲ್ಲ, ಆದ್ದರಿಂದ ಆರೋಪಿಯಾದ ನೀವು ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಕಾಯ್ದೆ ಕಲಂ 138 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರಶ್ನೆ 1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರಾ?
ಉತ್ತರಃ- ಹೌದು

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ- ಸುಳ್ಳು ವಿಚಾರಣೆಯಾಗಬೇಕು

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿತರು ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.

ದಿನಾಂಕಃ 30-11-2022

ಸಹಿ

**(ಶಿವಕುಮಾರ್.ಆರ್)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.**